

## ನಕ್ಕುಬಿಡಿ



### ಎಲ್ಲಿ?

ಓದಿರದ ಅಪ್ಪ, ಓದಿದ ಮಗ ಇಬ್ಬರೂ ಒಂದು ಗುಡ್ಡಕ್ಕೆ ಟ್ರಿಪ್ ಹೋದರು. ರಾತ್ರಿಯಾಯ್ತು, ಟೆಂಟ್ ಏರಿಸಿ ಮಲಗಿದರು. ಅರ್ಧ ರಾತ್ರಿಯಲ್ಲಿ ಇಬ್ಬರಿಗೂ ಫಕ್ಕನೆ ಎಚ್ಚರವಾಯ್ತು.

ಮಗ ಮೇಲೆ ನೋಡಿ ಅಂದ, 'ವಾವ್... ಎಷ್ಟೊಂದು ನಕ್ಷತ್ರ ಸಮೂಹ, ಎಷ್ಟೊಂದು ಗ್ರಹ ಮಂಡಲ, ಎಷ್ಟೊಂದು ಆಕಾಶಗಂಗೆ ... ವಾವ್!'

ಅಪ್ಪ ಮೇಲೆ ನೋಡಿದವ ಕೂಗಿದ, 'ಏಯ್ .. ನಮ್ಮ ಟೆಂಟೆಲ್ಲೋ?'

★★★

### ಮಧ್ಯಾಹ್ನದ ನಿದ್ದೆ

ಮಧ್ಯಾಹ್ನವಾಗಿತ್ತು. ಮುದಿ ನಾಯಿಯೊಂದು ಇವನ ಮನೆಯಂಗಳದಲ್ಲಿ ಬಂದು ಅನುಮಾನದಿಂದ ನೋಡುತ್ತಿತ್ತು. ಕುತ್ತಿಗೆಯಲ್ಲಿ ಒಳ್ಳೆಯ ಬೆಲ್ಟು .. ದಿನಾ ಸ್ನಾನ ಮಾಡಿಸಿಕೊಂಡು ಚೊಕ್ಕಟವಾಗಿದ್ದ ನಾಯಿ! ಇವನು ಬಳಿ ಹೋಗಿ ಅದರ ಬೆನ್ನು ನೇವರಿಸಿದ. ತಿನ್ನಲು ಬೆಳಿಗ್ಗೆಯ ರೊಟ್ಟಿ ಚೂರು ಹಾಕಿದ. ತಿಂದು ಮೂಲೆಯಲ್ಲಿ ಹೋಗಿ ಮಲಗಿತು. ಒಂದೆರಡು ಗಂಟೆಯ ನಿದ್ದೆ ಮುಗಿಸಿ ಹೋಯಿತು. ಇದು ದಿನವೂ ಪುನರಾವರ್ತನೆಯಾಯ್ತು.

'ಇದರ ಮನೆ ಎಲ್ಲಿರಬಹುದು' ಎಂದು ಪರೀಕ್ಷಿಸಲು ಅದು ಎದ್ದು ಹೋಗುವಾಗ ಬೆನ್ನ ಹಿಂದೆ ಹೋದ. ಒಂದೊಳ್ಳೆ ಮನೆಯ ಒಳಗಡೆ ನಾಯಿ ಪ್ರವೇಶಿಸಿದಾಗ, 'ಬಂದೆಯಾ .. ಬಾ. ನೀನೇ ಅದೃಷ್ಟವಂತ' ಎಂದು ಮುದುಕನೊಬ್ಬ ನಾಯಿಯನ್ನು ಬರಮಾಡಿಕೊಂಡ. ಹಿಂದೆಯೇ ಬಂದಿದ್ದ ಇವನನ್ನು ನೋಡಿದವ, 'ನಿಮ್ಮನೇಗೆ ಬರ್ತಿತ್ತಾ? ನಾಳೆಯಿಂದ ನಾನೂ ಬರಲಾ? ನನ್ನ ಹೆಂಡ್ತಿಯ ವಾಚಾಳಿತನದಿಂದ ನನಗೂ ಮಧ್ಯಾಹ್ನ ನಿದ್ದೆ ಮಾಡಲಾಗ್ತಿಲ್ಲ ಮಾರಾಯ್ರೇ...' ಎಂದ.

★★★

### ವ್ಯತ್ಯಾಸ

ಎರಡು ಜೋಡಿ, ಒಂದು ಪ್ರೇಮಿಗಳದ್ದು, ಇನ್ನೊಂದು ದಂಪತಿ. ಪಾರ್ಕಿನಲ್ಲಿ ಹೋಗುತ್ತಿರಬೇಕಾದರೆ ಎದುರಿನಿಂದ ದೈತ್ಯಾಕಾರದ ನಾಯಿ ಕಚ್ಚಲು ಬಂತು. ತಪ್ಪಿಸಿಕೊಳ್ಳಲು ಮಾರ್ಗವಿಲ್ಲ. ಇಬ್ಬರು ಗಂಡಸರೂ ತಮ್ಮ ತಮ್ಮ ಸಂಗಾತಿಯನ್ನು ಮೇಲೆತ್ತಿ ಹಿಡಿದು ಕೊಂಡರು! ನಾಯಿ ಸ್ವಲ್ಪ ಹೊತ್ತು ಬೊಗಳಿ ವಾಪಾಸು ಹೋಯ್ತು.

ಪ್ರಿಯತಮೆಯನ್ನು ಕೆಳಗಿಳಿಸಿದಾಗ ಆಕೆ ತನ್ನ ಪ್ರೇಮಿಗೆ ಜೋತು ಬಿದ್ದು ಮುದ್ದಿಸುತ್ತಾ, 'ನನಗಾಗಿ ನಾಯಿ ಕಚ್ಚುವಿಕೆಗೂ ತಯಾರಾದೆಯಲ್ಲಾ ಡಿಯರ್' ಎಂದು ಸಂತೋಷಪಟ್ಟಳು. ಗಂಡ ತನ್ನ ಹೆಂಡತಿಯನ್ನು ಕೆಳಗಿಳಿಸಿದಾಗ ಅವನ ಹೆಂಡತಿ ಮುದ್ದಿಸುವುದು ಬಿಡಿ, ಅವನ ಕಪಾಳಕ್ಕೆ ಹೊಡೆದಳು. 'ಥೂ.. ನಿಮ್ಮ ಹೇಡಿತನಕ್ಕೆ! ನನ್ನನ್ನು ನಾಯಿ ಮೇಲೆ ಕಲ್ಲಿನಂತೆ ಎತ್ತಿ ಎಸೆಯಲು ಮುಂದಾದಿರಾ?!' ಎಂದೆನ್ನುತ್ತಾ ಸರಸರನೆ ಹೊರಟೇ ಹೋದಳು!

**(ಸಂಗ್ರಹ) ರವಿರಾಜ ಹಾಲಂಬಿ.**

ಪತ್ನಿ: ಮಳೆ ಸುರೀತಾ ಇದೆ, ಯಾಕ್ರೀ ಮನೆಗೆ ಬರಲಿಕ್ಕೆ ಇಷ್ಟು ತಡ ಮಾಡಿದ್ರಿ?
ಪತಿ: ದಾರಿಯಲ್ಲಿ ಸೀರೆಯ ಸೇಲ್ ನಡೀತಿತ್ತು. ಅದನ್ನು ನೋಡ್ಕೊಂಡು ನಿಂತ್ಬಿಟ್ಟೆ...
ಪತ್ನಿ: ಮತ್ತೇಕೆ ತರ್ಲಿಲ್ಲ?
ಪತಿ: ನಿನಗೊಪ್ಪುವಂಥಾ ಸೀರೆ ಇರ್ಲಿಲ್ಲ ಕಣೆ...!


ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು
ಶ್ರೀ ಚಂದ್ರಶೇಖರ್
ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು

99722 95444

ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಕ್ರಿಶ್ಚಿಯನ್ ಹಾಗು ಮುಸ್ಲಿಂ ಬಾಂಧವರಿಗೆ ಯಂತ್ರ ಮಂತ್ರಗಳ ಸಹಾಯವಿಲ್ಲದೆ ಕಾರ್ಯಸಿದ್ಧಿ ಮಾಡಿಕೊಡಲಾಗುವುದು

ಸ್ತ್ರೀಯರಿಗೆ ವಿಶೇಷ ಪರಿಹಾರ

ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ

ಸ್ತ್ರೀ ಪುರುಷರ ಕಠಿಣ ಸಮಸ್ಯೆಗಳನ್ನು ಗುಪ್ತವಾಗಿರಿಸಿ ಅತೀ ಶೀಘ್ರದಲ್ಲಿ ಪರಿಹಾರ ಮಾಡಿಕೊಡಲಾಗುವುದು

ಖಾಯಂ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ,
ತಾಂತ್ರಿಕರು ಶ್ರೀ ಚಂದ್ರಶೇಖರ್
U.N ಆರ್ಕೆಡ್, ಇಂದ್ರಪ್ರಸ್ಥ ಹೋಟೆಲ್ ಹತ್ತಿರ,
ವಿಜಯನಗರ ಮುಖ್ಯ ಬಸ್ ನಿಲ್ದಾಣದ ಹಿಂಭಾಗ,
ವಿಜಯನಗರ, ಬೆಂಗಳೂರು